# ಸ್ಪೇನ್‌ನತ್ತ ಶಾರುಖ್, ದೀಪಿಕಾ



ಶಾರುಖ್ ಖಾನ್ ಹಾಗೂ ದೀಪಿಕಾ ಸ್ಪೇನ್‌ನ ಮಲ್ಲೋರ್ಕಗೆ ಮಾರ್ಚ್‌ನಲ್ಲಿ ವಿಮಾನ ಹತ್ತಲಿದ್ದಾರೆ. ನಿರ್ದೇಶಕ ಸಿದ್ಧಾರ್ಥ್ ಆನಂದ್ ಅವರಿಗೂ ಈ ವಿಷಯ ಒಂದು ಬಗೆಯಲ್ಲಿ ನೆಮ್ಮದಿಯ ನಿಟ್ಟುಸಿರಿನ ಸಂಗತಿ. ಯಾಕೆಂದರೆ, ಹೋದವರ್ಷ ಅಕ್ಟೋಬರ್‌ನಲ್ಲೇ 'ಪಠಾಣ್' ಚಿತ್ರದ ಒಂದು ಹಾಡು ಹಾಗೂ ಕೆಲವು ಸಾಹಸ ದೃಶ್ಯಗಳನ್ನು ಅಲ್ಲಿ ಚಿತ್ರೀಕರಿಸಿಕೊಂಡು ಬರಬೇಕು ಎಂದು ಅವರು ಯೋಚಿಸಿದ್ದರು. ಶಾರುಖ್ ಖಾನ್ ಮಗ ಆರ್ಯನ್ ಖಾನ್ ಆ ಹೊತ್ತಿನಲ್ಲೇ ಡ್ರಗ್ಸ್ ಪ್ರಕರಣದಲ್ಲಿ ಸಿಲುಕಿಕೊಂಡರು. ಹೀಗಾಗಿ ಚಿತ್ರೀಕರಣ ಮುಂದಕ್ಕೆ ಹೋಗಿತ್ತು.

ಸುಣ್ಣದಕಲ್ಲಿನ ಬೆಟ್ಟಸಾಲುಗಳು ಹಾಗೂ ಕಣ್ಮನ ಸೆಳೆಯುವ ಕಡಲ ಕಿನಾರೆಗೆ ಮಲ್ಲೋರ್ಕ ಹೆಸರುವಾಸಿ. ಅಲ್ಲಿ ಇದುವರೆಗೆ ಹಿಂದಿ ಚಿತ್ರದ ಯಾವ ಗೀತೆಯನ್ನೂ ಚಿತ್ರೀಕರಿಸಿಲ್ಲವಂತೆ. ಅದಕ್ಕೇ ಅದನ್ನು ಲೊಕೇಷನ್ ಆಗಿ ಗೊತ್ತುಪಡಿಸಿಕೊಂಡು ನಿರ್ದೇಶಕ ಸಿದ್ಧಾರ್ಥ್ ಆನಂದ್ ಉತ್ಸುಕರಾದದ್ದು. ಅಲ್ಲಿ ಚಿತ್ರೀಕರಣ ಮಾಡಿದರೆ, ಹಾಡು ಹಿಟ್ ಆಗುವುದರಲ್ಲಿ ಅನುಮಾನವೇ ಇಲ್ಲ ಎಂಬ ಅಚಲ ನಂಬಿಕೆ ಅವರದ್ದು. ಕಳೆದ ವರ್ಷ 17 ದಿನಗಳ ಚಿತ್ರೀಕರಣಕ್ಕೆ ಅವರು ಯೋಜಿಸಿದ್ದರು. ಈಗ ಅದರಲ್ಲಿ ಏನಾದರೂ ಮಾರ್ಪಾಟು ಮಾಡಿಕೊಳ್ಳಬೇಕೆ ಎಂದು ಅವರು ತೀರ್ಮಾನಿಸಬೇಕಿದೆ. ಅಲ್ಲಿ ಚಿತ್ರೀಕರಣ ನಡೆಸಲು ಬೇಕಾದ ಅನುಮತಿ ಪಡೆಯುವ ಕೆಲಸದಲ್ಲಿ ಸಿದ್ಧಾರ್ಥ್ ನಿರತರಾಗಿದ್ದಾರೆ.

'ಬ್ಯಾಂಗ್ ಬ್ಯಾಂಗ್' ಹಾಗೂ 'ವಾರ್' ತರಹದ ಯಶಸ್ವಿ ಚಿತ್ರಗಳನ್ನು ಕೊಟ್ಟ ಸಿದ್ಧಾರ್ಥ್ 2020ರ ನವೆಂಬರ್‌ನಲ್ಲೇ 'ಪಠಾಣ್' ಚಿತ್ರ ಪ್ರಾರಂಭಿಸಿದ್ದರು. ಕೋವಿಡ್ ಅಲೆಗಳಿಂದಾಗಿ ಹಾಗೂ ಶಾರುಖ್ ಖಾನ್ ವೈಯಕ್ತಿಕ ಸಮಸ್ಯೆಗಳಿಂದಾಗಿ ಚಿತ್ರೀಕರಣ ಮೊದಲಿನಿಂದಲೂ ಅಂದುಕೊಂಡಂತೆ ಸಾಗಲಿಲ್ಲ. ಇನ್ನು ಕೆಲವು ಭಾಗಗಳ ಚಿತ್ರೀಕರಣ ಮುಗಿಸಿಕೊಂಡು, ಆದಷ್ಟು ಬೇಗ ಚಿತ್ರವನ್ನು ತೆರೆಗೆ ತರಬೇಕೆನ್ನುವುದು ಅವರ ಉದ್ದೇಶ. ಈ ಚಿತ್ರದಲ್ಲಿ ಸಲ್ಮಾನ್ ಖಾನ್ ಕೂಡ ಸಣ್ಣ ಪಾತ್ರದಲ್ಲಿ ಅಭಿನಯಿಸಲಿದ್ದಾರೆನ್ನುವುದು ವಿಶೇಷ.

■ ವಿಶಾಖ ಎನ್.

# 'ಗೆಹೆರಾಯಿಯಾಂ' ಮೆಚ್ಚಿದ ಲಿಜೊ



'ನಾನ್‌ಪಕ್ಕಳ್ ನೇರತ್ತು ಮಯಕ್ಕಮ್' ಮಲಯಾಳಂ ಸಿನಿಮಾದಲ್ಲಿ ಮಮ್ಮುಟ್ಟಿ ಅವರನ್ನು ಪಾತ್ರವಾಗಿಸಿ ನಿರ್ದೇಶಿಸುತ್ತಿದ್ದಾರೆ ಲಿಜೊ ಜೋಸ್ ಪೆಲಿಸೆರಿ. ತಮ್ಮ 'ಅಂಗಮಲ್ಯೆ ಡೈರೀಸ್', 'ಇ.ಮಾ.ಯೂ' ಚಿತ್ರಗಳಿಂದ ಸಂಚಲನ ಮೂಡಿಸಿದ್ದ ಅವರ 'ಚುರುಳಿ' ಮಲಯಾಳಂ ಚಿತ್ರ ಕಳೆದ ವರ್ಷ ತೆರೆಕಂಡಿತ್ತು. ಅದಕ್ಕೆ ಉಳಿದ ಅವರ ಚಿತ್ರಗಳಿಗೆ ಸಿಕ್ಕಷ್ಟು ಹೊಗಳಿಕೆ ಸಂದಿರಲಿಲ್ಲ. ಈಗ ಅವರು ಹಿಂದಿ ಚಿತ್ರವೊಂದನ್ನು ನೋಡಿ, 'ಜಸ್ಟ್ ವಾವ್!' ಎಂದು ಪ್ರತಿಕ್ರಿಯಿಸಿದ್ದಾರೆ.

ಲಿಜೊ ಅವರಿಗೆ ಇಷ್ಟವಾಗಿರುವ ಚಿತ್ರ 'ಗೆಹೆರಾಯಿಯಾಂ'. ಇನ್‌ಸ್ಟಾಂಗ್ರಾಂ ಪೋಸ್ಟ್‌ನಲ್ಲಿ ಈ ಚಿತ್ರದ ಪೋಸ್ಟರ್ ಹಾಕಿ, ತಮ್ಮ ಮೆಚ್ಚಿನ ಸಾಲನ್ನು ಬರೆದಿದ್ದಾರೆ. ಶಕುನ್ ಬಾತ್ರಾ ನಿರ್ದೇಶನದ ಚಿತ್ರಕ್ಕೆ ಮಿಶ್ರ ವಿಮರ್ಶೆಗಳು ವ್ಯಕ್ತಗೊಳ್ಳುತ್ತಿವೆ. ನಗರ ಸಂವೇದನೆಯ ಭಾವದ ಅಲೆಗಳನ್ನು ಶಕುನ್ ಬಾತ್ರಾ ಈ ಚಿತ್ರದಲ್ಲಿ ಪಡಿಮೂಡಿಸಿದ್ದಾರೆ. ಕಂಗನಾ ರನೋತ್, 'ಇಂತಹ ಕಸವನ್ನು ಮಾರಬಾರದು' ಎಂದು ಚಿತ್ರದ ಕುರಿತು ಕಟಕಿಯಾಡಿದ್ದರು.

ಅಮೆಜಾನ್ ಪ್ರೈಮ್‌ನಲ್ಲಿ ಚಿತ್ರ ತೆರೆಕಂಡಿದ್ದು, ಭಿನ್ನ ವಿಮರ್ಶೆಗಳು ಹೊರಬರುತ್ತಿವೆ. ಲಿಜೊ ಪ್ರಕಾರ, 'ನಾಜೂಕಾದ ವಸ್ತುವಿಷಯವನ್ನು ತೆರೆಮೇಲೆ ಮೂಡಿಸುವುದು ತಮಾಷೆಯಲ್ಲ. ಸಿನಿಮೆಟಿಕ್ ಅನುಕೂಲಗಳನ್ನು ಮಾಡಿಕೊಳ್ಳುವಾಗ ಹೇಳಬೇಕಾದ, ಹೇಳದೇ ಉಳಿಸಬೇಕಾದ ಸಂಗತಿಗಳು ಮುಕ್ಕಾಗುವ ಸಾಧ್ಯತೆ ಇದೆ. 'ಗೆಹೆರಾಯಿಯಾಂ' ಚಿತ್ರದಲ್ಲಿ ಹಾಗೆ ಆಗಿಲ್ಲ ಎನ್ನುವುದು ಗಮನಾರ್ಹ.'

ಟೀಕೆ, ಹೊಗಳಿಕೆ ಎರಡನ್ನೂ ಸಮಾನವಾಗಿ ಸ್ವೀಕರಿಸಿರುವ ದೀಪಿಕಾ ತಮ್ಮಷ್ಟಕ್ಕೆ ತಾವು ಮುಂದಿನ ಸಿನಿಮಾ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ. ■